## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಜಿ. ಶ್ರೀಕಂಠರಾಜೇ ಅರಸ್,ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಹೆಚ್.ಡಿ. ಕೋಟೆ (ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ರಾವಂದೂರು ಗ್ರಾಮ ಪಂಚಾಯತಿ,ಪಿರಿಯಾಪಟ್ಟಣ ತಾಲ್ಲೂಕು,)ಮೈಸೂರು ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:-ಮಾನ್ಯ ಉಪ ಲೋಕಾಯುಕ್ತ-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.12(3)ರಡಿ ಸಲ್ಲಿಸಿರುವ ವರದಿ ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಎಂವೈಎಸ್-1911/2015, ದಿ:21-04-2017.

-000-

ಪ್ರಸ್ತಾವನೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ದಿ:09-05-2017ರ ಅರೆ ಸರ್ಕಾರಿ ಪತ್ರದ ಜೊತೆ ಮಾನ್ಯ ಉಪ ಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ-12(3) ಅಡಿ ದಿನಾಂಕ:21.04.2017 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

ಸದರಿ ವರದಿಯಲ್ಲಿ ಶ್ರೀ ಡಿ.ಎನ್ ವೆಂಕಟರಮಣ ಬಿನ್ ಲೇಟ್ ನಾರಾಯಣಪ್ಪ, ಸಮಾಜ ಸೇವಕರು, ಆರ್.ಡಿ.ಕೊಪ್ಪಲು ಗ್ರಾಮ, ರಾವಂದೂರು ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ ಇವರು ತಮ್ಮ ದೂರಿನಲ್ಲಿ ಕೆಳಕಂಡ ಅಧಿಕಾರಿ ವಿರುದ್ಧ ಕರ್ತವ್ಯಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುವುದಾಗಿ ವರದಿಸಿರುತ್ತಾರೆ.

| ಕ್ರ. ಸಂ. | ಎದುರುದಾರರ ಹೆಸರು ಮತ್ತು ವಿವರ | ಎದುರುದಾರರ ಸಂಖ್ಯೆ |
|---|---|---|
| 1 | ಶ್ರೀ ಜಿ.ಶ್ರೀಕಂಠರಾಜೇಅರಸ್,ಕಾರ್ಯನಿರ್ವಾಹಕ ಅಧಿಕಾರಿಗಳು,ತಾ.ಪಂ.ಹೆಚ್.ಡಿ.ಕೋಟೆ | 1 |

ದೂರಿನ ಸಂಕ್ಷಿಪ್ತ ವಿವರಣೆ:

1. ರಾವಂದೂರು ಬಡಾವಣೆಯ ತೋಳಕಲ್ಲು ಕಾಲೋನಿಯಲ್ಲಿ 60*40 ಅಡಿ ಅಳತೆಯ ನಿವೇಶನವನ್ನು ದಿನಾಂಕ: 27.08.1997 ರಂದು ಕ್ರಯಕ್ಕೆ ಪಡೆದಿರುತ್ತಾರೆಂದು ಹಾಗೂ ಎಂ.ಆರ್.ನಂ.14/97-98 ರಂದು ಖಾತಾ ಕೂಡ ಆಗಿರುತ್ತದೆಂದು ತಿಳಿಸಿರುತ್ತಾರೆ. ಎದುರುದಾರರುಗಳು ಸ್ಥಳದಲ್ಲಿ ನಿವೇಶನ ಇಲ್ಲದೇ ಇದ್ದರೂ ಸಹಾ, ನಕಲಿ ದಾಖಲೆಗಳನ್ನು ಸೃಷ್ಟಿಸಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ ಎಂದು ವರದಿಸಿರುತ್ತಾರೆ.

2. ದೂರುದಾರರು ಸಲ್ಲಿಸಿರುವ ದೂರಿಗೆ ಎದುರುದಾರರಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ದೊಡ್ಡ ಬೇಲಾಳು ಗ್ರಾಮ ಪಂಚಾಯತಿ, ಪಿರಿಯಾಪಟ್ಟಣ ತಾಲ್ಲೂಕು ರವರು ದಿನಾಂಕ:05.08.2015 ರಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ, ದೂರುದಾರರು ದಿ:27.08.1997ರಲ್ಲಿ ಮಲ್ಲಮ್ಮ ಕೋಂ ಪುಟ್ಟರಾಜು ರವರಿಂದ ಕ್ರಯಕ್ಕೆ ತೆಗೆದುಕೊಂಡಿರುವುದಾಗಿ ದೂರು ಕೊಟ್ಟಿರುವುದು ಸತ್ಯಕ್ಕೆ ದೂರವಾಗಿರುತ್ತದೆಂದು ಹಾಗೂ ಗೋವಿಂದಪ್ಪ ಬಿನ್ ಲೇಟ್ ನಾರಾಯಣಪ್ಪ, ಆರ್.ಡಿ.ಕೊಪ್ಪಲು ಇವರು ಟಿ.ಕೆ.ಕಾಲೋನಿ ಹಾಗೂ ರಾವಂದೂರು

..2

ಈ ಮೂರು ಗ್ರಾಮಗಳಲ್ಲಿ ಎಲ್ಲಿಯೂ ವಾಸವಾಗಿರುವುದಿಲ್ಲವೆಂದು ಹಾಗೂ ಇವರ ನಿವೇಶನವು ಟಿ.ಕೆ. ಕಾಲೋನಿ ಗ್ರಾಮದಲ್ಲಿ ಇರುವುದಿಲ್ಲ ಹಾಗೂ ಅನುಭವದಲ್ಲಿಯೂ ಸಹ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

3. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಹೆಚ್.ಡಿ.ಕೋಟೆ ತಾಲ್ಲೂಕುರವರು ದಿ:16.11.2015 ರಂದು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ಶ್ರೀ ಗೋವಿಂದಪ್ಪ ಬಿನ್ ನಾರಾಯಣಪ್ಪ ರವರು ತೋಳಕಲ್ಲು ಕಲೋನಿಯ 60*40ಅಡಿ ಅಳತೆಯ ನಿವೇಶನಕ್ಕೆ ಸಂಬಂಧಪಟ್ಟಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆಂದು ಹಾಗೂ 60*40 ಅಡಿ ನಿವೇಶನ ಮಂಜೂರು ಆಗಿರುವ ಬಗ್ಗೆ ಯಾವುದೇ ಮೂಲ ದಾಖಲಾತಿಯಲ್ಲೂ ಕಂಡುಬಂದಿರುವುದಿಲ್ಲ ಹಾಗೂ ಇವರು ತಿಳಿಸಿರುವ ನಿವೇಶನವು ತೊಳಕಲ್ಲು ಕಂಡುಬಂದಿರುವುದಿಲ್ಲ ಹಾಗೂ ಇವರು ತಿಳಿಸಿರುವ ನಿವೇಶನವು ತೊಳಕಲ್ಲು ಕಾಲೋನಿ ಗ್ರಾಮದಲ್ಲಿ ಇರುವುದು ಕಂಡು ಬರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ದೂರುದಾರರು ಸಲ್ಲಿಸಿರುವ ದೂರು ಸತ್ಯಕ್ಕೆ ದೂರವಾಗಿರುತ್ತದೆಂದು ತಿಳಿಸಿರುತ್ತಾರೆ.

4. ದೂರುದಾರರು ಸಲ್ಲಿಸಿರುವ ದೂರು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಮತ್ತು ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರವನ್ನು ಪರಿಶೀಲಿಸಲಾಗಿ ಕಂಡು ಬರುವುದೇನೆಂದರೆ, ರಾವಂದೂರು ಬಡಾವಣೆಯ ತೋಳಕಲ್ಲು ಕಾಲೋನಿಯಲ್ಲಿ 60*40 ಅಡಿ ಅಳತೆಯ ನಿವೇಶನವನ್ನು ದಿ:27.08.1997 ರಂದು ಶ್ರೀ ಗೋವಿಂದಪ್ಪ ರವರಿಂದ ಕ್ರಯಕ್ಕೆ ಪಡೆದಿದ್ದು, ಎಂ.ಆರ್.ನಂ.14/97-98 ರೀತ್ಯಾ ಖಾತಾ ಕೂಡ ಆಗಿರುತ್ತದೆಂದು, ಆದರೆ ದೂರುದಾರರಿಗೆ ಸದರಿ ನಿವೇಶನ ಎಲ್ಲಿದೆ ಎಂಬುದೇ ಗೊತ್ತಿರುವುದಿಲ್ಲ ಎಂಬುದು ದೂರುದಾರರ ಆಪಾದನೆಯಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಎದುರುದಾರರು ಶ್ರೀ ಗೋವಿಂದಪ್ಪ ಎಂಬುವವರು ರಾವಂದೂರು ಬಡಾವಣೆಯ ತೋಳಕಲ್ಲು ಕಾಲೋನಿಯ 60*40 ಅಡಿ ಅಳತೆಯ ನಿವೇಶನ ನಕಲಿ ದಾಖಲೆ ಸೃಷ್ಟಿಸಿಕೊಂಡು ಖಾತೆ ಮಾಡಿಸಿ ಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

5. ಶ್ರೀ ಜಿ.ಶ್ರೀಕಂಠರಾಜೆ ಅರಸ್,ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಹೆಚ್.ಡಿ.ಕೋಟೆ ಈ ಹಿಂದೆ ಗ್ರಾಮ ಪಂಚಾಯತಿ ಕಾರ್ಯದರ್ಶಿ, ರಾವಂದೂರು ಗ್ರಾಮದ ಪಂಚಾಯತ್, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ ರವರು ದಿನಾಂಕ:23.02.2017ರ ಪತ್ರದ ಮುಖೇನಾ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ಅವರು ಹೊಸದಾಗಿ ಸೇವೆಗೆ ಸೇರಲಾಗಿ ರಾವಂದೂರು ಗ್ರಾಮ ಪಂಚಾಯತಿಗೆ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅನುಭವದ ಕೊರತೆಯಿಂದಾಗಿ ಕೈತಪ್ಪಿನಿಂದ ದೂರುದಾರರ ವಿಚಾರದ ಬಗ್ಗೆ ದಾಖಲಿಸಿ ತದನಂತರ ತೋಳಕಲ್ಲು ಕಾಲೋನಿಯ 60*40 ಅಡಿ ನಿವೇಶನದ ಬಗ್ಗೆ ಆರ್.ಡಿ.ಕೊಪ್ಪಳು ಗ್ರಾಮದ ಶ್ರೀ ಗೋವಿಂದಪ್ಪ ಬಿನ್ ನಾರಾಯಣಪ್ಪ ರವರಿಗೆ 60*40 ಅಡಿ ನಿವೇಶನ ಮಂಜೂರು ಆಗಿರುವ ಬಗ್ಗೆ ಯಾವುದೇ ಮೂಲ ದಾಖಲಾತಿಯಲ್ಲೂ ಕಂಡು ಬರದೆ ಇದ್ದು, ದಾಖಲಾತಿ ಸೃಷ್ಟಿ ಮಾಡಿಕೊಂಡು ಹಾಗೂ ಇವರು ತಿಳಿಸಿರುವ ನಿವೇಶನವು ತೋಳಕಲ್ಲು ಕಾಲೋನಿ ಗ್ರಾಮದಲ್ಲಿ ಇಲ್ಲದೇ ಇರುವುದು ಕಂಡುಬಂದಿರುತ್ತದೆಂದು ವರದಿಸಿರುತ್ತಾರೆ.

6. ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರ ಆಕ್ಷೇಪಣೆ ಹಾಗೂ ಪ್ರತ್ಯುತ್ತರವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಎದುರುದಾರರಾದ ಶ್ರೀ ಜಿ.ಶ್ರೀಕಂಠರಾಜೇ ಅರಸ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಹೆಚ್.ಡಿ.ಕೋಟೆ ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ರಾವಂದೂರು ಗ್ರಾಮ ಪಂಚಾಯತ್, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ ರವರು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಎಂದು ವರದಿಸಿರುತ್ತಾರೆ.

(ಅ) ರಾವಂದೂರು ಬಡಾವಣೆಯ ತೋಳಕಲ್ಲು ಕಾಲೋನಿಯ 60*40 ಅಡಿ ನಿವೇಶನವನ್ನು ಶ್ರೀ ಗೋವಿಂದಪ್ಪ ಬಿನ್ ನಾರಾಯಣಪ್ಪ ರವರ ಹೆಸರಿಗೆ ಖಾತೆ ಮಾಡಿಕೊಟ್ಟಿರುತ್ತಾರೆ. ಆದರೆ, ಸದರಿ ನಿವೇಶನ ಅಸ್ತಿತ್ವದಲ್ಲಿ ಇರುವುದಿಲ್ಲ.

(ಆ) ಎದುರುದಾರರು ಶ್ರೀ ಗೋವಿಂದಪ್ಪ ಬಿನ್ ನಾರಾಯಣಪ್ಪ ರವರು ಸಲ್ಲಿಸಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸದೆ, ರಾವಂದೂರು ಬಡಾವಣೆಯ ತೋಳಕಲ್ಲು ಕಾಲೋನಿಯ 60*40 ಅಡಿ ನಿವೇಶನವನ್ನು, ಸದರಿ ನಿವೇಶನ ಅಸ್ತಿತ್ವದಲ್ಲಿ ಇಲ್ಲದೆ ಇದ್ದರೂ ಸಹಾ, ಸದರಿ ಪ್ರಶ್ನಿತ ನಿವೇಶನದ ಖಾತೆಯನ್ನು ಶ್ರೀ ಗೋವಿಂದಪ್ಪ ಬಿನ್ ನಾರಾಯಣಪ್ಪ ರವರ ಹೆಸರಿಗೆ ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ದೂರುದಾರರು ಎದುರುದಾರರ ಆಕ್ಷೇಪಣೆ, ಮತ್ತು ದೂರುದಾರರ ಪ್ರತ್ಯುತ್ತರ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಎದುರುದಾರರ ವಿರುದ್ದ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದು ವರೆಯುವುದು ಅಗತ್ಯ ಎಂದು ಕಂಡುಬಂದಿದ್ದು, ಎದುರುದಾರರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ ಎಂದು ವರದಿಸಿರುತ್ತಾರೆ.

9. ಆದುದರಿಂದ, ಮೇಲಿನ ಕಾರಣ ಕಡತದಲ್ಲಿನ ಆಧಾರಗಳಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆ / ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14(ಎ) ರ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ ಎಂದು ವರದಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಶ್ರೀ ಜಿ.ಶ್ರೀಕಂಠರಾಜೇ ಅರಸ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಹೆಚ್.ಡಿ.ಕೋಟೆ (ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ರಾವಂದೂರು ಗ್ರಾಮದ ಪಂಚಾಯತ್, ಪಿರಿಯಾಪಟ್ಟಣ ತಾಲ್ಲೂಕು) ಮೈಸೂರು ಜಿಲ್ಲೆ ಇ... ಸರ್ಕಾರಿ ನೌಕರರಾಗಿದ್ದು,

ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಉಪ ನಿಯಮ 14(ಎ)ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ-2 ರವರಿಗೆ ವಹಿಸಲು ಮಾನ್ಯ ಸರ್ಕಾರವು ತಿರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 149 ವಿಸೇಬಿ 2017,ಬೆಂಗಳೂರು,ದಿನಾಂಕ:03-08-2017.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಶ್ರೀ ಜಿ.ಶ್ರೀಕಂಠರಾಜೇ ಅರಸ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಹೆಚ್.ಡಿ.ಕೋಟೆ(ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ರಾವಂದೂರು ಗ್ರಾಮದ ಪಂಚಾಯತ್, ಪಿರಿಯಾಪಟ್ಟಣ ತಾಲ್ಲೂಕು) ಮೈಸೂರು ಜಿಲ್ಲೆ ಇವರ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957 ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತ-2, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

3/8/17.
(ಡಿ.ಎಸ್. ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

<u>ಇವರಿಗೆ,</u>

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ಮೈಸೂರು
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು-01

<u>ಪ್ರತಿ ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.